ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೆ, ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಹೇಳಿದ್ದೆವು.

ಅಧ್ಯಕ್ಷರು.—ಮಾನ್ಯ ಸಚಿವರು ಸ್ಟೇಟ್‌ಮೆಂಟ್ ಮಾಡುತ್ತೇವೆಂದು ತಿಳಿಸಿದ್ದರು, ಈಗ ತಾವು ಸಿದ್ದರಿದ್ದೀರಾ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಸಿದ್ಧವಾಡಿಕೊಂಡಿದ್ದೇನೆ. ನಾಳೆಯವರೆಗೆ ಕಾಲಾವಕಾಶ ಕೊಡಿ. ನಾಳೆ ಸ್ಟೇಟ್‌ಮೆಂಟ್ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನನ್ನೆ ಕೇಳಿದರೆ ಇವತ್ತು ಕೊಡುತ್ತೇನೆಂದು ಹೇಳಿದರು ಇವತ್ತು ಕೇಳಿದರೆ ನಾಳೆ ಮಾಡುತ್ತೇನೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು.—ಆಗಲಿ ಅವಕಾಶ ಕೊಡಿ.

ಶ್ರೀ ಜಿ.ರಾಜೂಗೌಡ —ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರವಾದ ಹಾನೂರುನಿಂದ ಅನೇಕ ತಂತಿ ಸಂದೇಶಗಳು ಬಂದಿವೆ. ಅಲ್ಲಿ ಕಳೆದ ೨೫ ದಿವಸಗಳಿಂದ ಕುಡಿಯುವ ನೀರಿಗೆ ತೊಂದರೆ ಆಗಿದೆ ಎಂದು...

ಅಧ್ಯಕ್ಷರು—ತಾವು ಗಮನ ಸೆಳೆಯುವ ಸೂಚನೆಯನ್ನು ಕಳಿಸಿಕೊಡಿ. ನೋಡೋಣ.

ಗಮನ ಸೆಳೆಯುವ ಸೂಚನೆಗಳು

ವಿಜಯನಗರದ ಹಳೆಯ ಕಾಲುವೆಗಳು ರಿಪೇರಿಯಿಲ್ಲದೆ ರೈತರ ಬೆಳೆಗೆ ತೊಂದರೆ.

ಶ್ರೀರಂಗದೇವರಾಯಲು:—ವಿಜಯನಗರ ಹಳೇ ಕಾಲುವೆಗಳ ರಿಪೇರಿಯಿಲ್ಲದೆ ರೈತರ ಬೆಳೆಗೆ ನೀರಿಲ್ಲದ ತೊಂದರೆಯಾಗಿರುವ ಬಗ್ಗೆ ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಜಿ ಪುಟ್ಟಸ್ವಾಮಿ ಗೌಡ (ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ.

ತುಂಗಭದ್ರಾ ನದಿಗೆ ಅಡ್ಡಲಾಗಿ ಅಣೆಕಟ್ಟುಗಳನ್ನು ನಿರ್ಮಾಣಮಾಡಿ "ವಿಜಯನಗರದ ಕಾಲುವೆಗಳು" ಎಂಬ ನಾಮಾಂಕಿತದಿಂದಲೇ ಸ್ಪಷ್ಟೀಕರಣವಾಗುವಂತೆ, ವಿಜಯನಗರ ಸಾಮ್ರಾಟರಿಂದ ಶತಮಾನಗಳ ಹಿಂದೆ ಕಾಲುವೆಗಳನ್ನು ನಿರ್ಮಾಣಮಾಡಲಾಗಿದ್ದು, ಈ ನಾಲೆಗಳು ವೈಶಿಷ್ಟಪೂರ್ಣವಾಗಿ ಕಾಂಟೂರ್ ಪಂಕ್ತಿಕರಣದಲ್ಲಿ ಹಾಯ್ದಿರುವುದು. ಈ ನಾಲೆಗಳಿಂದ ರಾಯಚೂರು ಜಿಲ್ಲೆಯ ಗಂಗಾವತಿ ಮತ್ತು ಕೊಪ್ಪಳ ತಾಲ್ಲೂಕುಗಳಲ್ಲಿಯು ಮತ್ತು ಬಳ್ಳಾರಿ ಜಿಲ್ಲೆಯ ಹೊಸಪೇಟೆ ಹಾಗೂ ಶಿರಗುಪ್ಪ ತಾಲ್ಲೂಕಿನ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ. ರಾಯಚೂರು ಜಿಲ್ಲೆಯಲ್ಲಿ ಆರು ಕಾಲುವೆಗಳು ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಹತ್ತು ಕಾಲುವೆಗಳು ಈ ಪುರಾತನ ಅಣೆಕಟ್ಟುಗಳಿಂದ ಹರಿಯುವುದು. ಈ ನಾಲೆಗಳ ನಾಮಾಂಕಿತ ಕೆಳಕಂಡಂತೆ ಸೂಚಿಸಲಾಗಿದೆ.

ಕ್ರಮ ಸಂಖ್ಯೆ	ರಾಯಚೂರು ಜಿಲ್ಲೆ ವ್ಯಾಪ್ತಿ	ಬಳ್ಳಾರಿ ಜಿಲ್ಲೆ ವ್ಯಾಪ್ತಿ
೧.	ಹುಲಗಿ ನಾಲೆ	೧. ರಾಯನಾಲೆ
೨.	ಶಿವಪುರು ನಾಲೆ	೨. ಬಸಪ ನಾಲೆ
೩.	ಆನೆಗುಂಡಿ ನಾಲೆ,	೩. ಬೆಲ್ಲನಾಲೆ
೪.	ಅಪ್ಪರ್ ಗಂಗಾವತಿ ನಾಲೆ	೪. ಕಲ್ಕಟ್ಟನಾಲೆ
೫.	ಲೋಯರ್ ಗಂಗಾವತಿ ನಾಲೆ	೫. ತುರ್ತಾ ನಾಲೆ
೬.	ಬೈಚಾಲ್ ನಾಲೆ	೬. ರಾಮಸಾರ್ಗನಾಲೆ
		೭. ಕಂಪ್ಲಿ ನಾಲೆ
		೮. ಬೆಲ್‌ಗೋದಾಲ್ ನಾಲೆ
		೯. ಸಿರಗುಪ್ಪನಾಲೆ
		೧೦. ದೇಶನೂರ್ ನಾಲೆ

ಈ ನಾಲೆಗಳು ತುಂಗಭದ್ರಾನದಿಗೆ ಅಡ್ಡಲಾಗಿ ಬಾರಿ ಬಂಡೆಗಳನ್ನು ಜೋಡಿಸಿ ನಿರ್ಮಾಣ ಮಾಡಿರುವ ಅಣೆಕಟ್ಟಿನಿಂದ ಹಾಯಲಾಗಿದ್ದು ಅಧಿಕೃತವಾಗಿ ರಾಯಚೂರು ಜಿಲ್ಲೆಯ ವ್ಯಾಪ್ತಿಯಲ್ಲಿ ೩೯೮೨ ಹೆಕ್ಟೇರು ಮತ್ತು ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ೮೨೨೮ ಹೆಕ್ಟೇರು ಭೂಮಿಯಲ್ಲಿ ಭತ್ತ, ಕಬ್ಬು ಮತ್ತು ಡಿ.ಸಿ.ಡಬ್ಲ್ಯೂ. ಬೆಳೆಗಳನ್ನು ಬೆಳೆಯಲು ನೀರನ್ನು ಒದಗಿಸಲು ಉದ್ದೇಶಿಸಿದೆ. ಮತ್ತು ಈ ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆಯಲಾದ ಬೆಳೆ ಸತತವಾಗಿ ಚೆನ್ನಾಗಿರುವುದು. ಗುಡ್ಡಗಳ ಅಡಿಯಲ್ಲಿ ಕಾಂಟೂರ್ ಪಂಕ್ತಿ ಕಿರಣದಲ್ಲಿ ಹಾಯಂವ ಈ ನಾಲೆಗಳ ಒಂದು ಭಾಗದಲ್ಲಿ ನಾಲೆಯಿಂದ ತೋಡಿದ ಮಣ್ಣನ್ನು ಉಪಯೋಗಿಸಿ ಒಡ್ಡುಗಳನ್ನು ಕಟ್ಟಲಾಗಿದ್ದು, ಮಣ್ಣಿನ ಗುಣ ಸಾಕಷ್ಟು ಒಳ್ಳೆಯದಲ್ಲ. ನಾಲೆಗಳ ಅಡ್ಡಲಾಗಿ ಯಾವುದೇ ತರಹ ಸಿ. ಡಿ. ಕಾಮಗಾರಿಗಳಿರುವುದಿಲ್ಲ ಮತ್ತು ಅಗತ್ಯವಿರುವೆಡೆ ಕೇವಲ ''ಇನ್‌ಲೆಟ್ ಔಟ್‌ಲೆಟ್'' ಮತ್ತು ಎಸ್ಕೇಪ್ ಸ್ಲೂಯಿಸುಗಳನ್ನು ನಿರ್ಮಾಣ ಮಾಡಲಾಗಿದೆ. ನೀರನ್ನು ಹಾಯಿಸುವ ವ್ಯವಸ್ಥೆಗಳು ಬಹಳ ಹಿಂದಿನ ಕಾಲದಲ್ಲಿ ನಿರ್ಮಾಣ ಮಾಡಲಾಗಿದ್ದು ಸರಿಯಾಗಿ ಕೆಲಸ ಮಾಡುತ್ತಿಲ್ಲ ಹಾಗೂ ನಾಲೆಯಲ್ಲಿ ಹೆಚ್ಚಳವಾಗಿ ಜೊಂಡು ಬೆಳೆಯುವುದು, ಈ ನಾಲೆಗಳಲ್ಲಿ ನೀರನ್ನು ಆಳತೆಯ ಅಧಾರದ ಮೇಲೆ ಹಾಯಿಸುವ ವ್ಯವಸ್ಥೆ ಇರುವುದಿಲ್ಲ. ಈ ಕಾರಣಗಳಿಂದಾಗಿ ನಾಲೆಯಲ್ಲಿ ಬಿಡಲಾಗುವ ಶೇಕಡ ೫೦ ರಷ್ಟು ನೀರು ಮಾತ್ರ ಬೆಳೆಗೆ ಲಭ್ಯವಾಗುತ್ತಿದ್ದು ಉಳಿದ ನೀರು ನದಿಗೆ ಸೋರಿಹೋಗುವುದು. ಅಲ್ಲದೆ ಗುಡ್ಡದ ಮೇಲ್ಭಾಗದಿಂದ ಮಳೆಗಾದಲ್ಲಿ ಹರಿಯುವ ನೀರು ನೇರವಾಗಿ ನಾಲೆಗಳಿಗೆ ಬರುವ ಕಾರಣ ಬಹಳಷ್ಟು ಹೂಳು ತುಂಬುವುದು.

ಬಹಳ ಹಿಂದೆ ನೀರಾವರಿ ಸೌಲಭ್ಯವನ್ನು ಪಡೆಯಂತ್ತಿದ್ದ ರೈತಾಪಿ ವರ್ಗದವರಿಂದ ವಿಜಯನಗರದ ನಾಲಾ ಸಿಸ್ಟಂಗಳಲ್ಲಿ ದುರಸ್ಥಿ ಹಾಗೂ ನಿರ್ವಹಣಾ ಕೆಲಸಗಳನ್ನು ಕಾರ್ಯಾಗತ ಮಾಡುತ್ತಿದ್ದು ನಂತರ ನೀರಾವರಿ ಇಲಾಖೆಯಿಂದ ನಿರ್ವಹಣಾ ಕಾರ್ಯಗಳು ಮಾಡಲಾಗುತ್ತಿದೆ. ಸಾಮಾನ್ಯವಾಗಿ ನಾಲೆಗಳಲ್ಲಿ ''ಬೊಂಗಾ'' ಹಾಗೂ ''ಒಡಕು'' ಉಂಟಾಗುವ ಸಮಸ್ಯೆಗಳಿರುವುದಂ. ಆಳತೆ ದಾರದ ಮೇಲೆ ನಿಯಂತ್ರಣವಾಗಿ ನೀರನ್ನು ಹಾಯಿಸುವ ಸಾಧ್ಯತೆ ಇಲ್ಲದ ಕಾರಣ ಅನಧಿಕೃತ ಪ್ರದೇಶಗಳಲ್ಲಿ ಹಾಗೂ ಏತಗಳ ಮೂಲಕ ನೀರನ್ನೆತ್ತಿ ಬೆಳೆಯುತ್ತಿರುವುದು ಹೆಚ್ಚಳವಾಗುತ್ತಿದ್ದು ಅಲ್ಲದೆ ನಿಗದಿತ ಲೋಕೆಲ್ಯೆಸೇಷನ್ ಬೆಳೆ ಬೆಳೆಯುವ ಬದಲು ನೀರಿನ ಪೂರೈಕೆ ಅಧಿಕವಾಗಿ ಬೇಕಾಗುವಂತಹ ಬೆಳೆ ಉಲ್ಲಂಘನೆಯಾಗುವ ಕಾರಣ ನಾಲೆಗಳ ತುದಿಬಾಗದ ಅಚ್ಚುಕಟ್ಟು ಪ್ರದೇಶಗಳಿಗೆ ನೀರು ಸಮರ್ಪಕವಾಗಿ ಹಾಯಿಸಲು ಸಾಧ್ಯವಾಗುತ್ತಿಲ್ಲ. ಉದಾಹರಣೆಗೆ ಗಂಗಾವತಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಈ ನಾಲೆಗಳ ಅಡಿಯಲ್ಲಿ ೨೪೪೧ ಹೆಕ್ಟೇರ್ ಪ್ರದೇಶ ಲೋಕೆಲೈಸ್ ಆಗಿದ್ದಲ್ಲಿ ಬೆಳೆಯಲಾಗುವ ಪ್ರದೇಶ ಸರಾಸರಿ ೩೩೦೦ ಹೆಕ್ಟೇರಂಗಳಾಗಿರುವುದು.

ವಿಜಯನಗರ ಕಾಲುವೆಗಳ ಅಚ್ಚುಕಟ್ಟು ಪ್ರದೇಶಗಳಿಗೂ ಸಹ ಇತರ ನೀರಾವರಿ ಯೋಜನೆಗಳ ಅಚ್ಚುಕಟ್ಟು ಪ್ರದೇಶಕ್ಕೆ ನಿರ್ವಹಣಾ ಅನುದಾನವನ್ನು ಒದಗಿಸುವಂತೆ ಹೆಕ್ಟೇರು ಒಂದಕ್ಕೆ ೧೪೦ ರೂಗಳ ಆಳತೆ ಗೋಲಿನ ಆಧಾರದ ಮೇಲೆ ಒದಗಿಸಲಾಗುತ್ತಿದೆ. ಆದರೆ ಕಾಲುವೆಗಳ ನಿರ್ವಹಣಾ ಸಿಬ್ಬಂದಿ ವೆಚ್ಚ ಬಹುತೇಕವಾಗಿ ಭರಿಸಬೇಕಾಗಿದ್ದು ಉಳಿಕೆ ಅನುದಾನ ಕೇವಲ ಅಗತ್ಯವಾದ ಬೊಂಗಾ ಮತ್ತು ಒಡಕುಗಳನ್ನು ಮುಚ್ಚುವುದು ಜೊಂಡು ತೆಗೆಯಲು ಮಾತ್ರ ಸಾಧ್ಯವಾಗುತ್ತಿದೆ. ಕಾಲುವೆಯಿಂದ ಸೋರುವ ನೀರನ್ನು ತಾತ್ಕಾಲಿಕವಾಗಿ ತಡೆಯುವ ಕ್ರಮ ಕೈಗೊಳ್ಳುವುದು ಸಹಾ ಕ್ಲಿಷ್ಟಕರವಾಗಿರುವುದು. ಮತ್ತು ಶಾಶ್ವತ ದುರಸ್ಥಿ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಕಾಲುವೆಗಳಲ್ಲಿ ವರ್ಷದಲ್ಲಿ ಸುಮಾರು ೩೩೫ ದಿವಸಗಳ ಕಾಲ ನೀರು ಹಾಯಿಸಲಾಗುವುದು, ವಾರ್ಷಿಕವಾಗಿ ವಿಜಯನಗರದ ಕಾಲುವೆಗಳಿಗೆ ನಿರ್ವಹಣಾ ಅನುದಾನ ಸುಮಾರು ೨೨ ಅಥವಾ ೨೩ ಲಕ್ಷ ರೂ ಗಳಿದ್ದಲ್ಲಿ ಸಿಬ್ಬಂದಿ ವೆಚ್ಚವೇ ಸುಮಾರು ೧೮ ಲಕ್ಷ ರೂಗಳಾಗುವುದು.

ವಿಜಯನಗರದ ಕಾಲುವೆಗಳ ಶಾಶ್ವತ ದುರಸ್ಥಿ ಕೆಲಸಗಳ ಹಾಗೂ ಆಧುನೀಕರಣಕ್ಕಾಗಿ ೧೧.೪೫ ಕೋಟಿ ರೂಗಳ ಅಂದಾಜು ಮಾಡಲಾಗಿದೆ. ರಾಜ್ಯದಲ್ಲಿನ ವಿವಿಧ ಪುರಾತನ ಅಣೆಕಟ್ಟು ನಾಲೆಗಳ ಆಧುನೀಕರಣದ ಸಮಗ್ರ ಯೋಜನೆಗೆ ಸೇರ್ಪಡಿಸಿ ಕೇಂದ್ರ ಸರ್ಕಾರದಿಂದ ನೆರವನ್ನು ಕೋರುವ ಸಾದ್ಯತೆ ; ಅಸಾಧ್ಯತೆ ಬಗ್ಗೆ ಪ್ರಸ್ತಾಪ ಇನ್ನೂ ಪೂರ್ವಭಾವಿ ಪರಿಶೀಲನೆಯಲ್ಲಿದೆ. ವಿಜಯನಗರದ ನಾಲೆಗಳಲ್ಲಿ ಇರುವ ಸಮಸ್ಯೆಗಳೇ ರಾಜ್ಯದ ಇತರ ನದಿಗಳಿಗೆ ಅಡ್ಡಲಾಗಿ ಕಟ್ಟಲಾದ ಪುರಾತನ ಅಣೆಕಟ್ಟು ನಾಲೆಗಳಲ್ಲಿನ ಪರಿಸ್ಥಿತಿ ಸಹ ಇದೇ ರೀತಿ ಯಾಗಿದ್ದು ರಾಜ್ಯದ ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಹೆಚ್ಚಳ ಹಣ ನಿರ್ವಹಣಾ ಕೆಲಸಗಳಿಗಾಗಿ ಒದಗಿಸಲು ಸಾಧ್ಯವಾಗುತ್ತಿಲ್ಲ. ಮತ್ತು ಶಾಶ್ವತ ದುರಸ್ಥಿ ಕೆಲಸಗಳನ್ನು ಮಾಡಲಾಗುತ್ತಿಲ್ಲ. ಕೇಂದ್ರ ಸರ್ಕಾರದ ನೆರವಾಗಲೀ ಅಥವಾ ವಿಶ್ವಬ್ಯಾಂಕ್ ನೆರವಿನಿಂದ ಕಾರ್ಯವಾಗುತ್ತಿರುವ ರಾಷ್ಟ್ರೀಯ ಜಲನಿರ್ವಹಣಾ ಯೋಜನೆ ಅಡಿಯಲ್ಲಿ ಸೇರ್ಪಡಿಸುವ ಸಾಧ್ಯತೆ ಬಗ್ಗೆ ಪರಿಶೀಲನೆಯಲ್ಲಿದೆ. ರಾಷ್ಟ್ರೀಯ ಜಲನಿರ್ವಹಣಾ ಯೋಜನೆ ಅಡಿಯಲ್ಲಿ ಸೇರ್ಪಡೆ

ಯಾಗಬೇಕಾದ್ದಲ್ಲಿ ವಿಶ್ವಬ್ಯಾಂಕು ನಿಗಧಿಪಡಿಸಿರುವ ನಿಯಮಗಳನ್ನು ಅನುಸರಿಸಿ ಅಂದಾಜು ವರದಿ ತಯಾರು ಮಾಡಿ ಕೇಂದ್ರ ಜಲಸಂಪನ್ಮೂಲ ಸಚಿವಾಲಯದ ವತಿಯಿಂದ ರಚಿಸಲಾದ ಅಪ್ರೈಸಲ್ ಸಮಿತಿಯ ಬಿಡುಗಡೆ ಪಡೆಯಬೇಕಾಗುವುದು ಹಾಗೂ ಅಂದಾಜಿನ ಮಿತಿ ಒಂದು ಹೆಕ್ಟೇರು ಅಚ್ಚುಕಟ್ಟುಪ್ರದೇಶಕ್ಕೆ ೨೫೦೦ ರೂಗಳಿಂತ ಹೆಚ್ಚಳವಾಗಬಾರದು ಈ ನಿಯಮಗಳನ್ನನುಸರಿಸಿ ವರದಿ ತಯಾರು ಮಾಡಲು ನಿರ್ದೇಶಿಸಲಾಗಿದೆ. ಅಂದಾಜು ವರದಿ ಸ್ವೀಕೃತವಾದನಂತರ ವಿಶ್ವಬ್ಯಾಂಕಿನ ನೆರವನ್ನು ಕೋರಲಾಗುವುದು.

ಶ್ರೀ ಶ್ರೀರಂಗದೇವರಾಯಲು.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮಂತ್ರಿಗಳು ನಮ್ಮ ರಾಯಚೂರು ಜಿಲ್ಲೆಯನ್ನು ಬಹಳವಾಗಿ ನೆಗ್ಲೆಕ್ಟ್ ಮಾಡಿದ್ದಾರೆ. ಆನೆಗೊಂದಿ ಕಾಲುವೆಯಿಂದ ಸುಮಾರು ೫ ಸಾವಿರ ಎಕರೆಗೆ ನೀರಾವರಿಯಾಗುತ್ತಿತ್ತು, ಹಾಗೂ ಅಲ್ಲಿಂದ ೫–೬ ರಾಜ್ಯಗಳಿಗೆ ನಾವು ಬಾಳೆಯನ್ನು ಸಪ್ಲೈ ಮಾಡುತ್ತಿದ್ದೆವು. ಬಳ್ಳಾರಿ ಜಿಲ್ಲೆಯ ಕಂಪ್ಲಾಪುರದಲ್ಲಿ ಹಾಗೂ ರಾಯಚೂರು ಜಿಲ್ಲೆಯಲ್ಲಿ ಹೆಚ್ಚಿಗೆ ಬಾಳೆಯನ್ನು ಬೆಳೆಯುತ್ತಿದ್ದೇವೆ. ಆಗ ಪ್ರತಿವರ್ಷವೂ ಹೆಚ್ಚಿಗೆ ನೀರು ಸಿಕ್ಕುತ್ತಿತ್ತು. ಆದರೆ ಈಗ ಲೆಫ್ಟ್ ಬ್ಯಾಂಕ್ ಕೆನಾಲ್‌ನಿಂದ ನೀರನ್ನು ಸರಿಯಾಗಿ ಸರಬರಾಜು ಮಾಡುತ್ತಿಲ್ಲ, ಮತ್ತು ಆ ಕಾಲುವೆಯನ್ನು ರಿಪೇರಿ ಸಹ ಮಾಡಿಲ್ಲ. ಇದರಿಂದಾಗಿ ನಮ್ಮ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಗಂಗಾವತಿ ಅಪ್ಪರ್ ಕೆನಾಲ್ ಮತ್ತು ಲೋಯರ್ ಕೆನಾಲ್‌ಗೆ ಬರತಕ್ಕ ನೀರು ಡೈವರ್ಟ್ ಆಗಿ ಹೆಚ್ಚು ನೀರು ನದಿಗೆ ಹೋಗುತ್ತದೆ. ಇದನ್ನು ಸರಿಯಾಗಿ ರಿಪೇರಿ ಮಾಡಿಸಿದರೆ ನಮಗೆ ಸಾಕಷ್ಟು ನೀರು ಬರುತ್ತೆದೆ. ಮಾನ್ಯ ಮಂತ್ರಿಗಳನ್ನು ಅಲ್ಲಿಗೆ ಕರೆದುಕೊಂಡು ಹೋಗಿ ತೋರಿಸಬೇಕೆಂದಿದ್ದೆ. ಹಿಂದೆ ಮಾನ್ಯ ದೇವೇಗೌಡರು ನನ್ನ ಪ್ರಶ್ನೆಗೆ ಉತ್ತರ ಕೊಡುತ್ತಾ ಈ ನಾಲೆಯನ್ನು ರಿಪೇರಿ ಮಾಡಿಸಿ ಕೊಡುತ್ತೇನೆಂದು ಹೇಳಿದ್ದರು ಅವರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ತೋರಿಸಿದ್ದೆ. ಇತ್ತೀಚಿನ ಮಾನ್ಯ ಇರಿಗೇಷನ್ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ, ಮಾನ್ಯ ಮಂತ್ರಿಗಳು ಈ ಸದನದಲ್ಲಿ ಉತ್ತರವನ್ನು ಕೊಟ್ಟಿದ್ದಾರೆ ಅಲ್ಲಿ ೧ ಕೋಟಿ ರೂಪಾಯಿಯನ್ನು ಖರ್ಚು ಮಾಡಿ ರಿಪೇರಿ ಮಾಡಿಸಿದರೆ ಸುಮಾರು ೨೬೫ ಸಾವಿರ ಎಕರೆಗೆ ನೀರಾವರಿಯಾಗುತ್ತದೆ ಅಂತ. ನನ್ನ ಕ್ಷೇತ್ರಕ್ಕೆ ಕೊಪ್ಪಳ ಮತ್ತು ಗಂಗಾವತಿ ತಾಲ್ಲೂಕಿನ ಕೆಲವು ಪ್ರದೇಶಗಳು ಬರುತ್ತವೆ. ಅವೆಲ್ಲಾ ''ಎ'' ಕ್ಲಾಸ್ ಲ್ಯಾಂಡ್. ನಮಗೆ ನೀರು ಸರಿಯಾಗಿ ಬರದೇ ಇರುವುದರಿಂದ ಅಲ್ಲಿನ ರೈತರೆಲ್ಲಾ ಕಂಗಾಲಾಗಿದ್ದಾರೆ. ಆದ್ದರಿಂದ ತಾವು ದಯವಿಟ್ಟು ಅಲ್ಲಿಯ ರೈತರಿಗೆ ನೀರನ್ನು ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

೧–೦೦ ಪಿ.ಎಂ.

ಶ್ರೀ ಜಿ. ಪುಟ್ಟಸ್ವಾಮಿಗೌಡ. —ಮಾನ್ಯ ಅಧ್ಯಕ್ಷರೆ, ಈ ನಾಲೆಗಳು ಸುಮಾರು ೫೦೦–೬೦೦ ವರ್ಷಗಳ ಹಿಂದೆ ನಿರ್ಮಾಣವಾಗಿರತಕ್ಕವು, ಇವುಗಳನ್ನು ಯಾವುದೇ ತಾಂತ್ರಿಕ, ವೈಜ್ಞಾನಿಕ ಹಿನ್ನೆಲೆಯಲ್ಲಿ ಕಟ್ಟಲ್ಪಟ್ಟಿಲ್ಲ. ಮಾನ್ಯ ಸದಸ್ಯರೇ ಹೇಳಿರುವಂತೆ ಈ ನಾಲೆಗಳು ಬಹಳ ಕಡೆಗಳಲ್ಲಿ ಮಣ್ಣಿನಿಂದ ಕಟ್ಟಿರುವುದರಿಂದ ಅದರಲ್ಲಿ ಬರತಕ್ಕ ನೀರೆಲ್ಲಾ ಸೋರಿ ಹೋಗುವುದರ ಜೊತೆಗೆ ಹೊರಗಡೆ ಕೂಡ ಡೈವರ್ಟ್ ಆಗುತ್ತದೆ. ಇದಕ್ಕಿಂತ ಹೆಚ್ಚಾಗಿ ಅನಧಿಕೃತವಾಗಿ ಈ ಕಾಲುವೆಗಳಿಂದ ನೀರನ್ನು ತೆಗೆದುಕೊಳ್ಳತಕ್ಕುದ್ದೂ ಕೂಡ ಬಹಳ ಜಾಸ್ತಿ ಇದೆ. ಕೆ.ಆರ್.ಎಸ್.ನಲ್ಲಿ ಕೂಡ ಇದೆ ಸಮಸ್ಯೆ ಇತ್ತು. ಅಧಿಕೃತವಾಗಿ ಘೋಷಣೆ ಮಾಡಿರತಕ್ಕ ಅಚ್ಚುಕಟ್ಟಿಗೆ ನೀರನ್ನು ಕೊಡಲು ನಮಗೆ ಕಷ್ಟವಾಗಿದೆ. ಅಲ್ಲದೆ ನಾವು ಇದರ ರಿಪೇರಿಗೆ ಕೊಡತಕ್ಕ ಹಣವೂ ಕೂಡ ಬಹಳ ಕಡಿಮೆ.

ಒಂದು ಹೆಕ್ಟೇರಿಗೆ ೧೪೦ ರೂಪಾಯಿ ಎಂದು ಕೇಂದ್ರದ ಜಲ ಸಂಪನ್ಮೂಲ ಸಮಿತಿಯವರು ಮಾಡಿರುವ ನಿರ್ವಹಣಾ ವೆಚ್ಚದಲ್ಲಿ ಈ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೆ ಏನೇನು ಸಾಕಾಗುವುದಿಲ್ಲವೆಂದು ಈಗಾಗಲೇ ವಿವರಿಸಿದ್ದೇನೆ. ಒಂದು ಹೆಕ್ಟೇರಿಗೆ ೧೪೦ ರೂಪಾಯಿನಂತೆ ಕೊಟ್ಟರೆ ೧೩ ಲಕ್ಷ ರೂಪಾಯಿ ಆಗುತ್ತದೆ. ಆದರೆಲ್ಲಿ ಸಿಬ್ಬಂದಿ ವೆಚ್ಚಕ್ಕೆ ಕೊಡಬೇಕಾದುದು ೯ ಲಕ್ಷ ರೂಪಾಯಿ ಆಗುತ್ತದೆ ಇನ್ನು ನಾಲ್ಕು ಲಕ್ಷ ರೂಪಾಯಿಂಗಳಲ್ಲಿ ಈ ಕೆಲಸ ಮಾಡುವುದಕ್ಕಾಗುವುದಿಲ್ಲ. ಇದನ್ನು ಆಧುನೀಕರಣ ಕಾರ್ಯಕ್ರಮದಲ್ಲಿ ತೆಗೆದುಕೊಳ್ಳತಕ್ಕದ್ದು ಸೂಕ್ತ. ಈಗ ನಾವು ಆಧುನೀಕರಣ ಮಾಡತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಹೊಸ ಅಂದಾಜು ತಯಾರು ಮಾಡಿದ್ದೇವೆ. ಅದಕ್ಕೆ ೧೧.೪ ಕೋಟಿ ರೂಪಾಯಿ ಬೇಕಾಗುತ್ತದೆ ಇದನ್ನು ಕಾನೂನು ಚೌಕಟ್ಟಿನಲ್ಲಿ ಅದನ್ನು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕ ವ್ಯವಸ್ಥೆಮಾಡಿದ್ದೇವೆ. ಅಲ್ಲಿಂದ ಹಣ ಮಂಜೂರಾತಿ ಆದ ತಕ್ಷಣ ಆಧುನೀಕರಣ ವ್ಯವಸ್ಥೆ ಮಾಡುತ್ತೇವೆ. ನಂತರ ಸಮಸ್ಯೆ ಬಗೆಹರಿಯುತ್ತದೆಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಶ್ರೀರಂಗದೇವರಾಯಲು :—ಗಂಗಾವತಿಯ ಅಪ್ಪರ್ ಮತ್ತು ಲೋಯರ್ ಕೆನಾಲ್‌ನಲ್ಲಿ ಎಷ್ಟು ನೀರಿದೆ ? ಏಪ್ರಿಲ್ ಮಂತ್ತು ಮೇ ತಿಂಗಳಲ್ಲಿ ಮಾತ್ರ ನೀರು ಕಡಿಮೆ ಇದ್ದು ಫೀಡ್ ಆಗುತ್ತಿಲ್ಲ. ಅಲ್ಲಿ ಕೆಲವು ಬಂಡೆಗಳು ಇವೆ. ಅವನ್ನು ಒಡೆದು ಸರಿ ಮಾಡಿದರೆ ಲೋಯರ್ ಮತ್ತು ಅಪ್ಪರ್ ಕೆನಾಲ್ ನಿಂದ ದೊಡ್ಡ ಪ್ರಮಾಣದಲ್ಲಿ ನೀರು ಸರಬರಾಜು ಆಗುತ್ತದೆ. ಅದಷ್ಟು ಕಡಿಮೆ ಹಣದಲ್ಲಿ ಅದನ್ನು ಮಾಡಿಸಬಹುದು. ಆನೇಗುಂದಿ ಕೆನಾಲ್ ಬಗ್ಗೆಯೂ ಮಾನ್ಯ ಮಂತ್ರಿಗಳು ಉತ್ತರಿಸಿದ್ದಾರೆ. ಬಳ್ಳಾರಿ ಜಿಲ್ಲೆಗೆ ಒಂದು ಧೋರಣೆ, ರಾಯಚೂರು ಜಿಲ್ಲೆಗೆ ಒಂದು ಧೋರಣೆಯಿಂದ ನೋಡುತ್ತಿದ್ದಾರೆ. ರೈತರ ಬಗ್ಗೆ ಒಂದೊಂದು ಧೋರಣೆ ತಾಳುವುದನ್ನು ನಾನು ಇಷ್ಟಪಡುವುದಿಲ್ಲ. ಬಳ್ಳಾರಿ ಜಿಲ್ಲೆ ಬಗ್ಗೆ ಏನು ಧೋರಣೆ ತಾಳಿದ್ದಾರೆ ಅದೇ ಧೋರಣೆ ರಾಯಚೂರು ಜಿಲ್ಲೆಯ ಬಗ್ಗೆಯೂ ತೋರಬೇಕೆಂದು ಹೇಳುತ್ತೇನೆ. ರಾಯಚೂರು ಜಿಲ್ಲೆಯನ್ನು ಬಹಳ ಕೀಳಾಗಿ ನೋಡುತ್ತಿದ್ದಾರೆ. ಬಳ್ಳಾರಿ ಜಿಲ್ಲೆಯ ರೈತರ ಬಗ್ಗೆ ಏನು ಕಾಳಜಿ ವಹಿಸುತ್ತಿದ್ದೀರಿ, ಅದೇ ರೀತಿ ನಮ್ಮ ಜಿಲ್ಲೆಯಲ್ಲಿ ಕೂಡ ಮಾಡಿ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ .—ಮಾನ್ಯ ಸದಸ್ಯರ ಆಪಾದನೆ ಸರಿಯಾದುದಲ್ಲ. ರಾಜ್ಯದ ಎಲ್ಲ ರೈತರೂ ಒಂದೇ ನವಿಗೆ. ಬಳ್ಳಾರಿ ರೈತರೂ ಒಂದೇ, ರಾಯಚೂರಿನ ರೈತರೂ ಒಂದೇ ಸರ್ಕಾರದ ವತಿಯಿಂದ ನೀರು ಕೊಟ್ಟರೆ, ವಾಟರ್ ರೇಟ್, ಕಂದಾಯ ಎಲ್ಲ ತೆಗೆದುಕೊಳ್ಳುತ್ತೇವೆ. ಯಾವ ರೈತರಿಗೂ ಹಾಗೇ ನೀರು ಕೊಡುವುದಿಲ್ಲ. ರೈತ ಬೆಳೆದರೆ ನಾಡು ಸಮೃದ್ಧವಾಗುತ್ತದೆ. ಬಳ್ಳಾರಿಗೆ ಜಾಸ್ತಿ, ರಾಯಚೂರಿಗೆ ಕಡಿಮೆ ಕೊಡತಕ್ಕದ್ದು ನಮ್ಮಲ್ಲಿ ಇಲ್ಲ. ನಿಷ್ಪಕ್ಷಪಾತವಾಗಿ ಆನೆಗುಂದಿ ಮತ್ತು ನಿಮ್ಮ ನಾಲೆಗೆ ನೀರು ಬಿಡತಕ್ಕದ್ದಕ್ಕೆ ತಕ್ಕ ಕ್ರಮಗಳನ್ನು ನಾವು ತೆಗೆದುಕೊಳ್ಳುತ್ತೇವೆ ಏನು ನೀರು ಬಿಟ್ಟರೂ ನಾಲೆಗಳು ಆಧುನೀಕರಣವಾಗದಿದ್ದರೆ ನೀರು ಅಚ್ಚುಕಟ್ಟಿಗೆ ಹೋಗುವುದಕ್ಕೆ ಬದಲಾಗಿ ಹೊರಗೆ ಹೋಗುತ್ತದೆಂದು ಅವರಿಗೆ ಗೊತ್ತಾಗಿದೆ. ಮೊದಲು ಈ ಕಾರ್ಯವನ್ನು ಮಾಡಿದರೆ ಅವರ ಸಮಸ್ಯೆ ಬಹಳ ಬೇಗ ಬಗೆಹರಿಯುತ್ತದೆಂದು ನಂಬಿದ್ದೇನೆ. ಆ ದಿಸೆಯಲ್ಲಿ ನಾವು ಕೆಲಸ ಮಾಡುತ್ತೇವೆ. ಶ್ರೀರಂಗದೇವರಾಯಲು ಅವರು ಕೂಡ ಬಹಳ ಕಳಕಳಿಯಿಂದ ರೈತರಿಗೆ ನೀರು ಒದಗಿಸತಕ್ಕ ಕಾರ್ಯವನ್ನು ಮಾಡಿದ್ದಾರೆ : ಇದರಿಂದ ರೈತರು ಬಹಳಷ್ಟು ಮಟ್ಟಿಗೆ ಪ್ರಯೋಜನವನ್ನು ಪಡೆದಿದ್ದಾರೆ ; ಬದಲಿ ಉತ್ತಮವಾದ ಬೆಳೆಯನ್ನು ತೆಗೆದಿದ್ದಾರೆಂದು ಅವರೇ ಹೇಳಿದ್ದಾರೆ. ಸರ್ಕಾರದ ವತಿಯಿಂದ ಯಾವಾಗಲೂ ಇಬ್ಬಗೆಯ ನೀತಿ ಆಗುವುದಿಲ್ಲ, ಅನಾನುಕೂಲವಾಗುವುದಿಲ್ಲವೆಂದು ತಿಳಿಸಬಯಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸಚಿವರು ಆ ಮನೆಯಲ್ಲಿರುವುದರಿಂದ ಶ್ರೀ ಪೆರಿಕಲ್ ಎಂ. ಮಲ್ಲಪ್ಪನವರ ಗಮನ ಸೆಳೆಯುವ ಸೂಚನೆಯನ್ನು ಅವರು ಬಂದ ಮೇಲೆ ತೆಗೆದುಕೊಳ್ಳುತ್ತೇನೆ.

ಈಗ ಸದನ ಮುಂದುವರೆದು ಮಂತ್ರಿ ೨.೦೫ಕ್ಕೆ ಸಮಾವೇಶಗೊಳ್ಳುತ್ತದೆ.

ಸದನವು ಮಧ್ಯಾಹ್ನ ೧.೦೫ ಕ್ಕೆ ಮುಂದೂಡಲ್ಪಟ್ಟು ಪುನಃ ೨.೦೫ ಕ್ಕೆ ಸಮಾವೇಶಗೊಳ್ಳುವುದಾಗಿ ನಿಶ್ಚಯಿಸಲಾಯಿತು.

(ಸದನವು ೨ ಗಂಟೆ ೧೫ ನಿಮಿಷಕ್ಕೆ ಪುನಃ ಸಮಾವೇಶಗೊಂಡಿತು)
(ಮಾನ್ಯ ಅಧ್ಯಕ್ಷರು ಶ್ರೀ ಎಸ್. ಎಂ. ಕೃಷ್ಣ ಪೀಠವನ್ನು ಅಲಂಕರಿಸಿದರು.)

ನಿಯಮ 334 ರ ಮೇರೆಗೆ

(1) ಶರಾವತಿ, ಲಿಂಗನಮಕ್ಕಿ ಜಲಾಶಯದಲ್ಲಿ ಜಮೀನನ್ನು ಮುಳುಗಡೆಯಾದ ರೈತರಿಗೆ ಅರಣ್ಯ ಅಧಿಕಾರಿಗಳಿಂದ ಕಿರುಕುಳ

† ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಜಿಲ್ಲೆ ಹೊಸನಗರ ಕ್ಷೇತ್ರದ ದೋಬೈಲು, ಮಸಕಾನಿ ಕೋಡಿ, ಆಡಿನ ಕೊಟ್ಟಿಗೆ, ಕಲ್ಲಕೊಪ್ಪ, ಮಂಜರಿ ಕೊಪ್ಪ ಎಂಬ ಊರುಗಳಲ್ಲಿ ಶರಾವತಿ, ಲಿಂಗನಮಕ್ಕಿ, ಮುಳುಗಡೆ ರೈತರು ನೆಲೆಸಿ ವಾಸಿಸುತ್ತಿದ್ದಾರೆ. ಇಡೀ ದೇಶಕ್ಕೆ ಬೆಳಕು ಕೊಡಲು ಅವರು ಬೆಳೆದ ಮರ ಗಿಡ ಕಟ್ಟಿದ ಮನೆ ಎಲ್ಲವನ್ನೂ ನೀರಿನಲ್ಲಿ ತೇಲಿ ಬಿಟ್ಟು ಅಲ್ಪಸ್ವಲ್ಪ ಜಮೀನು ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ. ಸುಮಾರು ೩೦ ವರ್ಷಗಳಿಂದ ಸ್ವಾಧೀನ ಅನುಭವದಲ್ಲಿರುವ ಭೂಮಿಯನ್ನು ಹಿಂದಿನ ಸರ್ಕಾರ ಮತ್ತು ಇಂದಿನ ಸರ್ಕಾರ ಮಂಜೂರಾತಿಮಾಡಿ ಸಾಗುವಳಿ ಚೀಟಿ ಕೊಟ್ಟಿಲ್ಲ. ಸಾಗುವಳಿಯಲ್ಲಿರುವ ಭೂಮಿಯಲ್ಲಿ ಭತ್ತ, ಕಬ್ಬು, ರಾಗಿ, ಹತ್ತಿ ಬೆಳೆಯನ್ನು ಬೆಳೆಯುತ್ತಿದ್ದಾರೆ. ಈಗಾಗಲೇ ಬಿತ್ತನೆ ಆಗಿರುವ ಹಸನಾದ ಜಮೀನಿನ ಮೇಲೆ ಅರಣ್ಯ